ರಸ್ತೆಯನ್ನು ಸೇರಿಸಿಲ್ಲ. ಆದ್ದರಿಂದ, ಎಲ್ಲೆಲ್ಲಿ ನಗರಸಭೆ ಮತ್ತು ಪುರಸಭೆಗಳ, ನಮ್ಮ ಇಲಾಖೆಗೆ ಬರುವ ರಸ್ತೆಗಳೇನಿವೆ ಅವುಗಳನ್ನು ದುರಸ್ಥಿ ಮಾಡುವ ಕೆಲಸ ಮಾಡುತ್ತೇವೆ. ಅದರ ಬಗ್ಗೆ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ. ವಿಶ್ವಬ್ಯಾಂಕ್ ಯೋಜನೆ ಅಡಿಯಲ್ಲಿ ಕೆಲವು ಸೇರಿಲ್ಲ ಎನ್ನುವುದು ಸರಿ, ಆದರೆ ಎನ್‌ಕ್ರೋಚ್‌ಮೆಂಟ್ ರಿಮೂವ್ ಸಲುವಾಗಿ ನಾವು ಮಾಡುತ್ತೇವೆ ರಸ್ತೆಗಳ ಅಗಲೀಕರಣವನ್ನು ನಾವು ಎಲ್ಲೂ ತೆಗೆದುಕೊಳ್ಳುತ್ತಿಲ್ಲ; ರಾಜ್ಯ ಹೆದ್ದಾರಿಯಲ್ಲಿರುವ ರಸ್ತೆಗಳನ್ನು ದುರಸ್ಥಿ ಮಾಡಿ ರಿಹ್ಯಾಬಿಲಿಟೇಷನ್ ಸ್ಕೀಂ ಏನಿದೆ ಅಲ್ಲಿ 16 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ.

ಶ್ರೀ ಎನ್.ಚಿಲುವರಾಯಸ್ವಾಮಿ : ಇದು ರಿಹ್ಯಾಬಿಲಿಟೇಷನ್ ಸ್ಕೀಂ ಎನ್ನುವುದು ನಮಗೆ ಮನವರಿಕೆಯಾಗಿದೆ; ಆದರೆ ಏನ್‌ಕ್ರೋಚ್‌ಮೆಂಟ್ ಮಾಡಿರುವುದನ್ನು ತೆಗೆಸಲೇಬೇಕಾಗಿದೆ, ಇದರ ಬಗ್ಗೆ ತಾವು ಸ್ಪಷ್ಟವಾದ ಆದೇಶವನ್ನು ಕೊಡಬೇಕು. ನನ್ನ ತಾಲ್ಲೂಕಿನಲ್ಲಿರುವ ರಸ್ತೆಗಳು ತಮ್ಮ ಇಲಾಖೆಯ ವ್ಯಾಪ್ತಿಯೊಳಗೆ ಬರುತ್ತಿದ್ದು, ಕೊಳಲಾಪುರ-ತುರುವೇಕೆರೆ ರಸ್ತೆ ಇದು ಎನ್.ಹೆಚ್. ರೋಡ್‌ನಿಂದ ಚಾಮಲಾಪುರದಿಂದ ಬಿಂಡಿಗನವಿಲೆಗೆ ಹೋಗುತ್ತದೆ, ಈ ರಸ್ತೆ ತುಂಬಾ ಹದಗೆಟ್ಟಿದ್ದು ಸೈಕಲ್ ಕೂಡ ಹೋಗದೇ ಇರತಕ್ಕಂಥ ಪರಿಸ್ಥಿತಿ ಇದೆ, ಮತ್ತೊಂದು ದೇವಲಾಪುರದಿಂದ ಮಾರ್ಕೋನಹಳ್ಳಿಗೆ ಬರುವ ರಸ್ತೆಯೂ ಕೂಡ ಕೆಟ್ಟು ಹೋಗಿದೆ. ಆ ಎರಡು ರಸ್ತೆಗಳು ಕೂಡ ತುಂಬಾ ಕೆಟ್ಟಿದ್ದು, ಮನುಷ್ಯರು ತಿರುಗಾಡಲಿಕ್ಕೆ ಆಗದೇ ಇರತಕ್ಕಂತಹ ಪರಿಸ್ಥಿತಿ ಇದೆ. ಎಲ್ಲಾ ರಸ್ತೆಯನ್ನು ಒಟ್ಟಿಗೆ ಸರಿಮಾಡಿಸಿ ಎಂದು ನಾನು ತಮ್ಮನ್ನು ಒತ್ತಾಯಿಸುವುದಿಲ್ಲ. ತಾವು ಕೆಲಸ ಮಾಡತಕ್ಕಂಥದ್ದರ ಬಗ್ಗೆ ನನಗೆ ಅರಿವು ಇದೆ. ಆದರೆ ಮೇಲ್ಕಾಣಿಸಿದ ಎರಡು ರಸ್ತೆಗಳನ್ನು ತುಂಬಾ ಅನಿವಾರ್ಯವಾಗಿರುವುದರಿಂದ ದಯಮಾಡಿ ಸರಿಮಾಡಿಸಿ ಕೊಡಬೇಕು, ಅದರ ಜೊತೆಗೆ ಎನ್‌ಕ್ರೋಚ್‌ಮೆಂಟ್ ಮಾಡಿರುವುದನ್ನು ತೆಗೆಸಲಿಕ್ಕೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕು.

ಶ್ರೀ ಧರ್ಮಸಿಂಗ್ : ಎನ್‌ಕ್ರೋಚ್‌ಮೆಂಟಿಗೆ ಸಂಬಂಧಪಟ್ಟ ಹಾಗೆ ಮತ್ತು ಬೇರೆ ಕೆಲಸಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಆದೇಶ ಕೊಡುತ್ತೇನೆ.

ಉಪ್ಪಿನಂಗಡಿ-ಕಡಬ-ಸುಬ್ರಹ್ಮಣ್ಯ ರಸ್ತೆಯ ಹೊಸಮಠದಲ್ಲಿರುವ ಮುಳುಗು ಸೇತುವೆಯನ್ನು ಸರ್ವಋತು ಸೇತುವೆಯನ್ನಾಗಿ ಮಾಡುವ ಬಗ್ಗೆ

138(1065) - ಶ್ರೀ ಅಂಗಾರ .ಎಸ್. (ಸುಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಪ್ಪಿನಂಗಡಿ-ಕಡಬ-ಸುಬ್ರಹ್ಮಣ್ಯ ರಸ್ತೆಯ ಹೊಸಮಠ ಎಂಬಲ್ಲಿ ಮುಳುಗು ಸೇತುವೆ ಇದ್ದು ಮಳೆಗಾಲದಲ್ಲಿ ವಿಪರೀತ ಮಳೆಯಿಂದ ಮಳೆ ನೀರು ಸೇತುವೆ ಮೇಲೆ ಬಂದು ಅನೇಕ ಸಾವು ನೋವುಗಳು ಸಂಭವಿಸಿ, ವಾಹನ ಸಂಚಾರಕ್ಕೂ, ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸೇತುವೆಯನ್ನು ಸರ್ವಋತು ಸೇತುವೆಯನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಇದ್ದರೆ ಯಾವಾಗ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಈ ಪ್ರದೇಶವು ಭಾರಿ ಮಳೆ ಬೀಳುವ ಪ್ರದೇಶವಾಗಿರುತ್ತದೆ. ವಿಪರೀತ ಹಾಗೂ ಒಂದೇ ಸಮ ಮಳೆ ಬಂದಾಗ, ಈ ಸೇತುವೆಯು ಸ್ವಲ್ಪ ಕಾಲ ಅಂದರೆ ಒಂದೆರಡು ದಿನಗಳು ಮುಳುಗುವುದು ಮತ್ತು ಸಾಮಾನ್ಯವಾದ ಮಳೆಗಾಲದಲ್ಲಿ ಒಂದೆರಡು ಗಂಟೆಗಳ ಕಾಲ ಮುಳುಗುವುದು.

ಆ) ಈ ಸರ್ವಋತು ಸೇತುವೆ ಕಾಮಗಾರಿಯನ್ನು ಕೆ.ಆರ್.ಡಿ.ಸಿ.ಎಲ್. ಮೂಲಕ ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು. ಈಗಾಗಲೇ ಫೇಸ್-1 ರಲ್ಲಿ 148 ಸೇತುವೆಗಳಲ್ಲಿ 142 ಸೇತುವೆ ಕಾಮಗಾರಿಗಳನ್ನು ಕೆ.ಆರ್.ಡಿ.ಸಿ.ಎಲ್. ಮುಖಾಂತರ ಪೂರ್ಣಗೊಳಿಸಲಾಗಿದೆ.

ಶ್ರೀ ಎಸ್. ಅಂಗಾರ: ನನ್ನ "ಅ" ಪ್ರಶ್ನೆಗೆ "ಬಂದಿದೆ, ಮಳೆಗಾಲದಲ್ಲಿ ತೊಂದರೆ ಆಗಿದೆ" ಎನ್ನುವ ಉತ್ತರ ಕೊಟ್ಟಿದ್ದಾರೆ, ಜೊತೆಗೆ ನನ್ನ "ಆ" ಪ್ರಶ್ನೆಗೆ "ಕೆಆರ್‌ಡಿಸಿಎಲ್" ಮೂಲಕ ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು ಎಂದು ಉತ್ತರಿಸಿದ್ದಾರೆ. ಅಂದರೆ ಈ ಫೇಸ್-(1) ರಲ್ಲಿ 148 ಸೇತುವೆಗಳಲ್ಲಿ ಈ ಸೇತುವೆಯ ಕಾಮಗಾರಿ ಸೇರ್ಪಡೆಗೊಂಡಿದೆಯೇ? ಸೇರದಿದ್ದಲ್ಲಿ ಇದನ್ನು ಯಾವಾಗ ಈ ಕೆಆರ್‌ಡಿಸಿಎಲ್ ಮೂಲಕ ಕೈಗೆತ್ತಿಕೊಳ್ಳಲಾಗುವುದು? ಈ ಬಗ್ಗೆ ಮಾನ್ಯ ಮಂತ್ರಿಯವರು ಸ್ಪಷ್ಟವಾದ ಉತ್ತರ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ, ಅವರು ಹೇಳಿರುವ ತೊಂದರೆ ಇರುವುದು ನಿಜ. ಇದು 1965-66ನೇ ಸಾಲಿನಲ್ಲಿ ಕಟ್ಟಿರುವುದಾಗಿದೆ, ಅಲ್ಲಿ ಜಾಸ್ತಿ ಮಳೆ ಬಂದಾಗ ಸುಮಾರು ಎರಡು ದಿನಗಳ ಕಾಲ ಸಂಚಾರ ಸ್ಥಗಿತಗೊಳ್ಳುತ್ತದೆ, ಇದು ನಮ್ಮ ಗಮನಕ್ಕೆ ಬಂದಿದೆ. ಅದೇ ರಸ್ತೆಯಲ್ಲಿ ಎರಡು ಸೇತುವೆಗಳನ್ನು ಕಟ್ಟಿಸಿ ಜನರ ಅನುಕೂಲಕ್ಕಾಗಿ ಮಾಡಿ ಮಾಡಿಸಿಕೊಟ್ಟಿದ್ದೇವೆ. ಈಗ ಈ ಸೇತುವೆಯನ್ನು ಕೆಆರ್‌ಡಿಸಿಎಲ್ ಮೂಲಕ ಕೈಗೆತ್ತಿಕೊಳ್ಳಲು ಕಾರ್ಯಕ್ರಮ ಹಾಕಿಕೊಂಡು ಜನರ ಅನುಕೂಲಕ್ಕಾಗಿ ಅದನ್ನು ಮಾಡಿ ಕೊಡುತ್ತೇವೆ.

ಶ್ರೀ ಎಸ್. ಅಂಗಾರ : ಮಾನ್ಯ ಸಚಿವರು ಇದನ್ನು ತೆಗೆದುಕೊಳ್ಳುತ್ತಾರೆನ್ನುವ ಮಾತನ್ನು ಹೇಳಿದ್ದಾರೆ. ಆದರೆ ಈ ಸೇತುವೆಯನ್ನು ಆದಷ್ಟು ಬೇಗನೇ ಕೈಗೆತ್ತಿಕೊಳ್ಳದಿದ್ದಲ್ಲಿ ಬಹಳ ಕಷ್ಟವಾಗುತ್ತದೆ, ಈಗಲೂ ಕೂಡ ಬ್ಲಾಕ್ ಆಗುತ್ತದೆ, ಹಿಂದೆಯೂ ಕೂಡ ಅನೇಕ ಸಾವು-ನೋವುಗಳು ಆಗಿವೆ, ಆದ್ದರಿಂದ ಪುನಃ ನೀವು ನಿಧಾನ ಮಾಡಿದರೆ ಬಹಳ ಕಷ್ಟವಾಗುತ್ತದೆ, ಏಕೆಂದರೆ, ಅಲ್ಲಿ ಬಹಳ ಸಮಸ್ಯೆ ಇದೆ, ಆದ್ದರಿಂದ, ಇದನ್ನು ಆದಷ್ಟು ಶೀಘ್ರಗತಿಯಲ್ಲಿ ಕೈಗೆತ್ತಿಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : ರಾಜ್ಯದಲ್ಲಿ ನಾವು ಪ್ರಪ್ರಥಮವಾಗಿ 148 ಸೇತುವೆಗಳನ್ನು ತೆಗೆದುಕೊಂಡಿದ್ದೇವೆ, ಇದರ ಜೊತೆಗೆ ಇನ್ನೂ ನಾಲ್ಕಾರು ಸೇತುವೆ, ರಾಜ್ಯ ಹೆದ್ದಾರಿ, ಎಂ.ಡಿ.ಆರ್. ರಸ್ತೆಗಳನ್ನು ತೆಗೆದುಕೊಳ್ಳಬೇಕೆನ್ನುವ ಪ್ರಸ್ತಾವನೆ ನಮ್ಮ ಮುಂದೆ ಇದೆ. ಬಹಳ ಮಳೆ ಬಂದರೂ ಸ್ಥಗಿತವಾಗುವುದಿಲ್ಲ, 20 ಕಿ.ಮೀ. ನಿಂದಲೂ ಹೋಗುವಂಥ ಬದಲಿ ವ್ಯವಸ್ಥೆ ಮಾಡಿದ್ದೇವೆ, ಆದರೆ ಬಹಳ ತ್ವರಿತವಾಗಿ ಇದನ್ನು ತೆಗೆದುಕೊಳ್ಳುವ ರೀತಿಯಲ್ಲಿ ನಾವು ಕೆಲಸ ಮಾಡುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಂಗಾರರವರು ಇಷ್ಟೊಂದು ಆಗ್ರಹ ಮಾಡಲು ಕಾರಣ ಏನೆಂದರೆ, ಸುಬ್ರಹ್ಮಣ್ಯ ಯಾತ್ರಾ ಸ್ಥಳಕ್ಕೆ ಸಾವಿರಾರು ಜನ ನಮ್ಮ ಭಾಗದಿಂದ

ಅಂದರೆ ಉಡುಪಿ, ಮಂಗಳೂರು, ಕಾಸರಗೋಡಿನಿಂದ ಬರಬೇಕಾದರೆ ಇದೇ ರಸ್ತೆಯ ಮೂಲಕ ಹೋಗಬೇಕಾಗಿದೆ, ಮಳೆ ಬಂದಾಗ ಇದು ಬ್ಲಾಕ್ ಆಗುವುದು ಮಾನ್ಯ ಚಂದ್ರೇಗೌಡರವರಿಗೆ ಗೊತ್ತಿದೆ. ಅದಕ್ಕಾಗಿ ಅದನ್ನು ಶೀಘ್ರವಾಗಿ ತೆಗೆದುಕೊಳ್ಳಬೇಕೆಂದು ಆಗ್ರಹಪಡಿಸುತ್ತಿದ್ದಾರೆ.

ಶ್ರೀ ಧರ್ಮಸಿಂಗ್ : ಅದನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಬಸವರಾಜ್‌ರವರೇ, ತಮ್ಮದು ಗ್ರಾಮೀಣಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿದೆ.

ಶ್ರೀ ಹೆಚ್.ಸಿ. ಬಸವರಾಜು : ಈ ಪ್ರಶ್ನೆಯನ್ನು ನಾನು ಸನ್ಮಾನ್ಯ ಲೋಕೋಪಯೋಗಿ ಸಚಿವರಿಗೆ ಕೇಳಿದ್ದೇನೆ. ಇದು ಇವರಿಗೆ ಸಂಬಂಧಪಟ್ಟಿರುವುದು, ನಾನು ಇದನ್ನು ಮೂರು ಬಾರಿ ಕೇಳಿದ್ದು, ಕಳೆದ ಎರಡು ಬಾರಿಯೂ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ಉತ್ತರ ಕೊಟ್ಟಿದ್ದಾರೆ; ಆದ್ದರಿಂದ ಈ ಪ್ರಶ್ನೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸೇರುವುದಿಲ್ಲ. ಇದು ಲೋಕೋಪಯೋಗಿ ಇಲಾಖೆಗೆ ಸೇರುತ್ತದೆ, ಕಾವೇರಿ ನದಿಗೆ ಅಡ್ಡಲಾಗಿ ಕಟ್ಟುವ ಸೇತುವೆ.

ಅಧ್ಯಕ್ಷರು : ಮಾನ್ಯ ಧರ್ಮಸಿಂಗ್‌ರವರೇ, ಆ ಪ್ರಶ್ನೆಗೆ ನಿಮಗೆ ಸೇರಿದ್ದು ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಧರ್ಮಸಿಂಗ್ : ಗ್ರಾಮೀಣ ರಸ್ತೆಗಳು ಆಗತಕ್ಕಂಥಾದ್ದರ ಬಗ್ಗೆ ಕೇಳಿದ್ದಾರೆ, ಅದಕ್ಕೆ ನಾವು ಗ್ರಾಮೀಣಾಭಿವೃದ್ಧಿ ಇಲಾಖೆಗೆ ವರ್ಗಾಯಿಸಿದ್ದೇವೆ.

ಅಧ್ಯಕ್ಷರು : ಆಯಿತು, ಇಲ್ಲಿ ಡಿಸ್‌ಕಷನ್ ಬೇಡಿ.. ಒಂದು ಪಕ್ಷ ಅವರಿಗೆ ಸೇರಿದ್ದರೆ ನಾನು ಮಾನ್ಯ ಮಂತ್ರಿಗಳಿಗೆ ದೂರವಾಣಿ ಮಾಡಿ, ಮುಂದಿನ ವಾರ ತಮ್ಮ ಪ್ರಶ್ನೆ ಹಾಕಿಕೊಳ್ಳೋಣ ಬಿಡಿ. ಮುಂದಿನ ಪ್ರಶ್ನೆ ಮಾನ್ಯ ಮಲ್ಲಿಕಾರ್ಜುನ.. ಇನ್ನು ಬಂದಿಲ್ಲ. ಮುಂದಿನ ಪ್ರಶ್ನೆ ಮಾನ್ಯ ಸಿಂಧ್ಯ.

ರಾಜ್ಯದಲ್ಲಿರುವ ರಾಷ್ಟ್ರೀಯ ಉದ್ಯಾನವನ ಪ್ರದೇಶಗಳು

141(703) - ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕನಕಪುರ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ರಾಷ್ಟ್ರೀಯ ಉದ್ಯಾನವನಗಳ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರಗಳನ್ನು ಕೊಡುವುದು.

ಆ) ಈ ರಾಷ್ಟ್ರೀಯ ಉದ್ಯಾನವನಕ್ಕೆ ಸೇರಿದ ಪ್ರದೇಶಗಳಲ್ಲಿ ಸುಮಾರು 50 ವರ್ಷಗಳಿಂದ ವಾಸವಾಗಿರುವ ಜನರನ್ನು : ಹಳ್ಳಿಗಳನ್ನು ಸ್ಥಳಾಂತರಿಸಲಾಗುವುದೇ?

ಇ) ಸ್ಥಳಾಂತರಿಸಿದಲ್ಲಿ ಪರಿಹಾರದ ವ್ಯವಸ್ಥೆ ಮಾಡಲಾಗಿದೆಯೇ? (ವಿವರಗಳನ್ನು ಕೊಡುವುದು)

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಐದು ರಾಷ್ಟ್ರೀಯ ಉದ್ಯಾನವನಗಳಿದ್ದು, ಅವುಗಳು ಈ ಕೆಳಗಿನಂತಿರುತ್ತವೆ:-

1. ಅಣಶಿ ರಾಷ್ಟ್ರೀಯ ಉದ್ಯಾನವನ, ಉತ್ತರ ಕನ್ನಡ ಜಿಲ್ಲೆ
2. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನಗರ ಜಿಲ್ಲೆ